ಸಾಕ್ಷಿಯನ್ನು ದಿಃ 06-03-2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆ 2 ರಿಂದ 4 ನೇ ಪ್ರತಿವಾದಿಗಳ ಪರ - ಶ್ರೀಮತಿ ಹೆಚ್ ಬಿ ಆರ್ ವಕೀಲರಿಂದಃ**

ದಿಃ02.07.1979 ರಂದು ಮಾಡಿದ ಕ್ರಯದ ಕರಾರು ಪತ್ರವನ್ನು ನಾನು ಹಾಜರು ಪಡಿಸಿದ್ದೇನೆ. ಸದರಿ ದಾಖಲೆಯಮೇಲೆ ಕೊರತೆ ಮುದ್ರಾಂಕ ಶುಲ್ಕವನ್ನು ಜಿಲ್ಲಾ ನೋಂದಣಾಧಿಕಾರಿಗಳ ನಿರ್ದೇಶನದ ಪ್ರಕಾರ ಪ್ರತಿವಾದಿಗಳು ಸಂದಾಯ ಮಾಡಿದ್ದರಿಂದ ಸದರಿ ಕರಾರು ಪತ್ರವನ್ನು ನಿಡಿ-5 ಎಂದು, ಆ ಬಗ್ಗೆ ನೋಂದಣಾಧಿಕಾರಿಗಳು ಕಳುಹಿಸಿದ ಪತ್ರವನ್ನು ನಿಡಿ-5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಎಸ್ ಜೆ ವಕೀಲರಿಂದಃ**

ಪಾರ್ತಲಿಂಗನ್ ಮೃತ 3 ನೇ ಪ್ರತಿವಾದಿಗೆ ಅಣ್ಣನಾಗಬೇಕು. ಪಾರ್ತಲಿಂಗನ್ ಹಾಗೂ 3 ನೇ ಪ್ರತಿವಾದಿ ಈಗ್ಗೆ 5-6 ವರ್ಷದ ಹಿಂದಿನವರೆಗೂ ಒಟ್ಟಿಗೆ ಇದ್ದರು. ದಿಃ02.07.1979 ರಂದು ಸರ್ವೆ ನಂ.63/3 ರ ಸ್ವತ್ತಿನ ಖಾತೆ ಯಾರ ಹೆಸರಿಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ತುಂಡು ಭೂಮಿ ನಿಷೇದ ಕಾಯ್ದೆ ಯಾವ ಇಸವಿಯಲ್ಲಿ ಬಂತು, ಎಲ್ಲಿಯವರೆಗೆ ಊರ್ಜಿತದಲ್ಲಿತ್ತು ಎನ್ನುವುದು ನನಗೆ ಗೊತ್ತಿಲ್ಲ. ತುಂಡು ಭೂಮಿ ನಿಷೇದ ಕಾಯ್ದೆ ಯಾವಾಗ ರದ್ದಾಯಿತು ಎನ್ನುವುದನ್ನು ಪವರ್ ಅಫ್ ಅಟಾರ್ನಿ ಪಡೆದುಕೊಳ್ಳುವ ಪೂರ್ವದಲ್ಲಿ ನಾನು ತಿಳಿದುಕೊಂಡಿಲ್ಲ.

ನಿಡಿ-5 ರ ಕರಾರು ಪತ್ರ ಬರೆಯುವಾಗ ನಾನು ಸ್ಥಳದಲ್ಲಿ ಹಾಜರು ಇರಲಿಲ್ಲ. ನಿಡಿ-5 ರ ಕರಾರು ಪತ್ರಕ್ಕೆ ಗೋವಿಂದಪ್ಪ, ಬಿ ಟಿ ತಿಮ್ಮಯ್ಯ, ಮಹಲಿಂಗಪ್ಪ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಅವರಲ್ಲಿ ಬಿ ಟಿ ತಿಮ್ಮಯ್ಯ ಬದುಕಿದ್ದಾರೆ. ಸದರಿ ತಿಮ್ಮಯ್ಯನ ತಂದೆ ಹೆಸರು ತಿಮ್ಮಯ್ಯ ಇರಬೇಕು ನನಗೆ ನಿಖರವಾಗಿ ಗೊತ್ತಿಲ್ಲ. ನಿಡಿ-5 ರ ಕರಾರು ಪತ್ರದಲ್ಲಿ ಯಾರ ಹೆಬ್ಬೆಟ್ಟಿನ ಗುರುತು

ಇಲ್ಲ. ನಿಡಿ-5 ನ್ನು ಬರೆದ ಪತ್ರಬರಹಗಾರರು ಬದುಕಿದ್ದಾರೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಶಿವಣ್ಣ, ಪಾತಯ್ಯ ಹಾಗೂ ಶಂಬುಲಿಂಗಪ್ಪ ಬದುಕಿಲ್ಲ ಎಂದರೆ ಸಾಕ್ಷಿ ಶಂಬುಲಿಂಗಪ್ಪ ಬದುಕಿದ್ದಾರೆ ಎಂದು ಉತ್ತರಿಸುತ್ತಾರೆ. 2, 3, 4 ನೇ ಪ್ರತಿವಾದಿಗಳು ಹಾಗೂ ಪಾರ್ತಲಿಂಗನ್ ಬದುಕಿದ್ದಾಗ ಶಿವಣ್ಣ, ಪಾತಯ್ಯ ಹಾಗೂ ಶಂಬುಲಿಂಗಪ್ಪನಿಗೆ ನೋಟೀಸ್ ಕೊಟ್ಟಿದ್ದರೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಜಮೀನಿನ ಕ್ರಯ ಪತ್ರ ಮಾಡಿಕೊಡಿ ಎಂದು ಶಿವಣ್ಣ, ಪಾತಯ್ಯ, ಶಂಬುಲಿಂಗಪ್ಪನವರನ್ನು ನಾನು ಒಂದು ಸಾರಿ ಕೇಳಿದ್ದೇನೆ. ಅವರು ನನಗೆ ಯಾವುದೇ ಕರಾರು ಬರೆದುಕೊಟ್ಟಿಲ್ಲ ಎಂದರೆ ಸರಿ.

ಮೃತ 2 ರಿಂದ 4 ನೇ ಪ್ರತಿವಾದಿಗಳು, ಮೃತ ಪಾರ್ತಲಿಂಗನ್ ಹಾಗೂ ಶಿವಣ್ಣ, ಪಾತಯ್ಯ, ಶಂಬುಲಿಂಗಪ್ಪನವರ ನಡುವೆ ಏನು ವ್ಯವಹಾರವಾಗಿತ್ತು ಎನ್ನುವ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ದಿಃ15.11.1985 ರಂದು 1 ನೇ ಪ್ರತಿವಾದಿ ಮೃತ 4 ನೇ ಪ್ರತಿವಾದಿಗೆ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ 1985 ರಲ್ಲಿ ದಾವಾಸ್ತಿಯ ಖಾತೆ ಯಾರ ಹೆಸರಿನಲ್ಲಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಈಗ ದಾವಾಸ್ತಿಯ ಖಾತೆ ದೇವೀರಮ್ಮ, ಶಿವಣ್ಣ, ಗಿರಿಜಮ್ಮ ಹಾಗೂ ಶಂಬುಲಿಂಗಪ್ಪನವರ ಹೆಸರಿನಲ್ಲಿದೆ. ಅವರ ಹೆಸರಿಗೆ ಖಾತೆ ಹೇಗೆ ದಾಖಲಾಗಿದೆ, ಯಾವಾಗ ದಾಖಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

ಶಿವಣ್ಣ, ಪಾತಯ್ಯ, ಶಂಬುಲಿಂಗಪ್ಪನವರು, ಪಾರ್ತಲಿಂಗನ್, ದೊಡ್ಡಪಾತಪ್ಪ ಹಾಗೂ ಕುಂಟಪ್ಪನಿಗೆ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರ್ತಲಿಂಗನ್, ದೊಡ್ಡಪಾತಪ್ಪ ಹಾಗೂ ಕುಂಟಪ್ಪನಿಗೆ ನಾನು ಹತ್ತಿರದ ಸಂಬಂಧಿಕನಲ್ಲ ಎಂದರೆ ಸರಿಯಲ್ಲ. ನಾನು ಅವರ ಮಗನಲ್ಲ ಎಂದರೆ ಸರಿ. ಈ ದಾವೆಯ ವಿಚಾರ ನನಗೆ ಏನು

ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪಂಚಾಯತಿ ನಡೆದಿತ್ತು ಎಂದು ನಾನು ಹೇಳಿದ್ದು, ನಾನು ಹೇಳುವ ಪಂಚಾಯತಿ ನಡೆದು ಈಗ್ಗೆ 14-15 ವರ್ಷಗಳು ಆಗಿವೆ. ಸದರಿ ಪಂಚಾಯತಿಗೆ ಮಹಲಿಂಗಪ್ಪ, ಕರಿಯಪ್ಪ, ನನ್ನ ತಂದೆ, ಮಾವ ಕುಂಟಪ್ಪ,ಚಂದ್ರಶೇಖರ್ ಸೇರಿದ್ದರು. ಪಂಚಾಯತಿ ನಡೆದ ಬಗ್ಗೆ ಯಾವುದೇ ಬರವಣಿಗೆ ಆಗಿಲ್ಲ. ಜಮೀನಿನ ಕರಾರುಪತ್ರ ಬರೆದುಕೊಟ್ಟ ಲಾಗಾಯತಿನಿಂದ ಕ್ರಯ ಪತ್ರ ಬರೆದುಕೊಡಲು ಕೇಳುತ್ತಿದ್ದಾರೆ

1979 ರಲ್ಲಿ ನನಗೆ 16 ರಿಂದ 18 ವರ್ಷ ವಯಸ್ಸು ಇದ್ದಿರಬಹುದು. ಪಂಚಾಯತಿ ನಡೆದ ನಂತರ ಕ್ರಯ ಪತ್ರ ಬರೆದುಕೊಟ್ಟಿಲ್ಲವೆಂದು ಆ ಮೂವರಿಗೆ ನೋಟೀಸ್ ಕೊಟ್ಟಿಲ್ಲ ಕರಾರು ಪತ್ರವಾದಾಗಿನಿಂದ ಮಾಡಿದ ಪಂಚಾಯತಿಯಲ್ಲಿ ಭಾಗವಹಿಸಿದವರು ಈಗ ಯಾರೂ ಇಲ್ಲ ಶಿವಣ್ಣ, ಪಾತಯ್ಯ, ಶಂಬುಲಿಂಗಪ್ಪ ಹಾಗೂ ಪಾರ್ತಲಿಂಗನ್, ದೊಡ್ಡಪಾತಪ್ಪ ಹಾಗೂ ಕುಂಟಪ್ಪನ ನಡುವೆ ಯಾವುದೇ ಮಾತುಕತೆಯಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳು, ದೊಡ್ಡಪಾತಪ್ಪ ಕುಂಟಪ್ಪ, ಪಾರ್ತಲಿಂಗನ್ ರವರಿಗೆ ಸ್ವತ್ತಿನ ಸ್ವಾಧೀನ ಬಿಡಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕರಾರು ಪತ್ರವಾದಾಗಿನಿಂದ ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ. ವಾದಿಗಳು ಊರಿನಲ್ಲಿ ಇಲ್ಲದ ಸಮಯದಲ್ಲಿ ದೊಡ್ಡಪಾತಪ್ಪ, ಕುಂಟಪ್ಪ, ಪಾರ್ತಲಿಂಗನ್ ಅತಿಕ್ರಮ ಪ್ರವೇಶ ಮಾಡಿ ಅಕ್ರಮ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ ಈಗ್ಗೆ 30 ವರ್ಷಗಳಿಂದ ನಾವು ದಾವಾಸ್ತಿಯ ಸ್ವಾದೀನದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳೇ ಈ ದಿನಕ್ಕೂ ದಾವಾಸ್ತಿಯ ಮಾಲೀಕರು ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗಳಿಗೆ ಬಿಟ್ಟರೇ ಬೇರೆ ಯಾರಿಗೂ ಸ್ವಾದೀನತೆ ಇಲ್ಲ ಎಂದರೆ ಸರಿಯಲ್ಲ. ದೊಡ್ಡಪಾತಪ್ಪ ಕುಂಟಪ್ಪ, ಪಾರ್ತಲಿಂಗನ್ ರವರು

ಶಿವಣ್ಣ, ಪಾತಯ್ಯ ಹಾಗೂ ಶಂಬುಲಿಂಗಪ್ಪನ ಹೆಸರಿನಲ್ಲಿ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಇರುವ ಸಹಿಗಳು ಶಿವಣ್ಣ ಪಾತಯ್ಯ ಹಾಗೂ ಶಂಬುಲಿಂಗಪ್ಪನ ಸಹಿಗಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.